ಈ) ಷೆಡ್ಡುಗಳು ಪೂರ್ಣಗೊಂಡ ನಂತರ ಅವುಗಳ ವಿವರಗಳನ್ನು ಪ್ರತಿ ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆ ಅಭಿವೃದ್ಧಿ ನಿಗಮದ ಕಛೇರಿಗಳಲ್ಲಿ ಅಧಿಸೂಚಿಸಿ ಸ್ಥಳೀಯ ವೃತ್ತ ಪತ್ರಿಕೆಗಳಲ್ಲಿ ಪ್ರಕಟಿಸಿ ಅರ್ಜಿಗಳನ್ನು ಷೆಡ್ಡು ವಿತರಣೆಗಾಗಿ ಕರೆಯಲಾಗುತ್ತಿವೆ. ಹೀಗೆ ಸ್ವೀಕೃತವಾದ ಅರ್ಜಿಗಳನ್ನು ಜಿಲ್ಲಾಮಟ್ಟ ಷೆಡ್ ವಿತರಣೆ ಸಮಿತಿಗಳಲ್ಲಿ ಪರಿಶೀಲಿಸಿ ಷೆಡ್ಡುಗಳನ್ನು ವಿತರಣೆ ಮಾಡಲಾಗುತ್ತಿದೆ, ಈ ವಿಧಾನವು ತೃಪ್ತಿಕರವಾಗಿದೆ.

ಊ) ಹೌದು. ದೂರುಗಳು ಬಂದಿವೆ. ಇವುಗಳ ಬಗ್ಗೆ ಈಗಾಗಲೇ ಸೂಕ್ತ ಕ್ರಮಗಳನ್ನು ತೆಗೆದು ಕೊಂಡು ಸಮಸ್ಯೆಗಳನ್ನು ಪರಿಹರಿಸಲಾಗುತ್ತದೆ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ.—ಅಧ್ಯಕ್ಷರೇ, ಇದರಲ್ಲಿ ೪ ವರ್ಷದ ಮುಂಚೆ ಎಂದರೆ ೧೯೮೦–೮೯ರಲ್ಲಿ ಮಂಜೂರಾದಂತವುಗಳನ್ನು ೧೯೮೧ರಲ್ಲಿ ಮುಗಿಸಿದ್ದಾರೆ. ೧೯೮೧ರಲ್ಲಿ ಮಂಜೂರಾದ ವುಗಳನ್ನು ಮುಗಿಸುವುದಕ್ಕೆ ಇನ್ನು ೨–೩ ವರ್ಷ ಬೇಕಾಗುತ್ತದೆ. ಇದರಿಂದ ಹೆಚ್ಚು ಜಾಸ್ತಿಯಾಗುತ್ತದೆ ಇನ್ನು ರಸ್ತೆ ಇಲ್ಲ ನೀರು ಇಲ್ಲ., ೫೫ ಷೆಡ್‌ಗಳನ್ನು ತಯಾರು ಮಾಡಿದ್ದೀರಿ. ಅಲ್ಲಿ ಇದರ ವ್ಯವಸ್ಥೆ ಮಾಡುತ್ತೀರಾ ? ಇನ್ನು ೧೦–೧೫ ಷೆಡ್‌ಗಳನ್ನು ಇಂಡಸ್ಟ್ರೀಸ್‌ನವರು ಕೇಳುತ್ತಿದ್ದಾರೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೇ, ಸದಸ್ಯರು ಹೇಳಿದಹಾಗೆ ನಿರ್ಣಯತೆಗೆದು ಕೊಂಡಮೇಲೆ ಕಟ್ಟಡ ಕಟ್ಟಲು ಬೇಗ ಪ್ರಾರಂಭ ಮಾಡಬೇಕು. ಬೇಗ ಮುಗಿಸಬೇಕು, ನಮ್ಮ ಸರ್ಕಾರ ಈ ೧೮ ತಿಂಗಳಲ್ಲಿ ೧೫೬೦ ಸೈಟುಗಳನ್ನು ಕೊಡತಕ್ಕ ನಿರ್ಣಯಮಾಡಿ ನಿಗಧಿತ ಅವಧಿಯಲ್ಲಿ ಮುಗಿಸುವಂತೆ ಆಜ್ಞೆಕೊಟ್ಟಿದ್ದೇವೆ. ಇದರ ಬಗ್ಗೆ ಸೂಕ್ತ ಕ್ರಮ ಕೈಗೊಂಡಿದ್ದೇವೆ. ಇನ್ನು ಖಾಲಿ ಇರತಕ್ಕ ಸೈಟುಗಳನ್ನು ಕೊಡುವುದಕ್ಕೆ ನಿಧಾನವಾಗಿದೆ ಇದರ ಬಗ್ಗೆ ಸಮಿತಿಗೆ ಆದೇಶ ಕೊಟ್ಟಿದ್ದೇನೆ. ಆದಷ್ಟು ಬೇಗ ವಿತರಣೆ ಮಾಡುತ್ತೇನೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಇಂಡಸ್ಟ್ರೀಸ್‌ನವರು ಮಳಿಗೆಗಳನ್ನು ಕಟ್ಟುತ್ತಾರೆ. ಅಲ್ಲಿ ರಸ್ತೆ ಇಲ್ಲ, ನೀರು ಇಲ್ಲ, ಅದನ್ನು ಕಟ್ಟುವಾಗಲೇ ಕೊಡಬೇಕು ಎಂದು ಹೇಳಿದರು. ಮಳಿಗೆ ಕಟ್ಟುವ ಜಾಗದಲ್ಲಿ ನೀರು ರಸ್ತೆ ವಿದ್ಯುಚ್ಛಕ್ತಿ ಎಲ್ಲವನ್ನು ಕೂಡ ಹೊಸ ದಾಗಿ ಕಟ್ಟುವಾಗಲೇ ಕೊಡಬೇಕೆಂದು ಆದೇಶ ಕೊಟ್ಟಿದ್ದೇವೆ. ಸಾಗರದಲ್ಲಿ ಈಗಾಗಲೇ ನೀರು, ಮತ್ತು ರಸ್ತೆಗಳನ್ನು ಮಾಡುವುದಕ್ಕಾಗಿ ೬೪ ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿದ್ದೇವೆ.

ಶ್ರೀ ಎಲ್.ಟಿ. ತಿಮ್ಮಪ್ಪಹೆಗಡೆ.—ಮತ್ತೊಂದು ವಿಚಾರ, ಸಾಗರ ತಾಲ್ಲೂಕಿಗೆ ಅಂಥ ಹೇಳಿ ದ್ದಾರೆ. ಆನಂದಪುರಂ ಪಶ್ಚಿಮ ಘಟ್ಟಗಳ ಯೋಜನೆಯಲ್ಲಿ ಮಂಜೂರಾಗಿದೆ. ಇದರ ಬಗ್ಗೆ ಯಾವಾಗ ಕ್ರಮ ತೆಗೆದುಕೊಳ್ಳುತ್ತೀರಿ? ಮತ್ತು ನೀರು ವಿದ್ಯುಚ್ಛಕ್ತಿಯನ್ನು ಸಾಗರ ಷೆಡ್‌ಗೆ ಕೊಟ್ಟ ಹಾಗೆ ಆನಂದಪುರಕ್ಕೆ ಕೊಡುವುದಕ್ಕೆ ಪ್ರಯತ್ನಿಸುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಆದಷ್ಟು ಬೇಗ ಪ್ರಾರಂಭ ಮಾಡುತ್ತೇನೆ. ಈಗಾಗಲೇ ಷೆಡ್ಡುಗಳು ಎಲ್ಲೆಲ್ಲಿ ಕಟ್ಟಿದ್ದೇವೆ, ಅಲ್ಲಿ ಅನುಕೂಲಗಳನ್ನು ಕಲ್ಪಿಸಿಕೊಡುತ್ತೇವೆ. ಮುಂದೆ ಬರತಕ್ಕ ಷೆಡ್ಡುಗಳಿಗೂ ಸಹ Simultaneously along with the construction of sheds Electricity, water and Roads will provided....ಆನಂದ ಪುರಂನಲ್ಲಿ ಆದಷ್ಟು ಬೇಗ ಪ್ರೊವೈಡ್ ಮಾಡುತ್ತೇವೆ.

ಕೈಮಗ್ಗದ ರೇಷ್ಮೆ ಉತ್ಪಾದನೆಯ ಭಾಂಗಿಗಳಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ವಿಧಿಸುತ್ತಿರುವ ವಿಮಾದರ

೪೪೧ (೮೫೭) ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ (ಗುಳೇದ ಗುಡ್ಡ).—ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಬೆಂಗಳೂರು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನಿಯಂತ್ರಣಾಧಿಕಾರಿಯವರು ಕೈಮಗ್ಗದ ರೇಷ್ಮೆ ಉತ್ಪಾದನೆಯ ಭಾಂಗಿಗಳಿಗೆ ಕೇಕಡಾ ಎಷ್ಟು ವಿಮಾ ಚಾರ್ಜ್ ಮಾಡುತ್ತಿದ್ದಾರೆ?

ಆ) ವಿಜಾಪುರ ಜಿಲ್ಲೆಯ ಗುಳೇದಗುಡ್ಡದಲ್ಲಿರುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನಿಯಂತ್ರಣಾಧಿಕಾರಿಯವರು ಕೈಮಗ್ಗದ ರೇಷ್ಮೆ ಉತ್ಪಾದನೆಯ ಭಾಂಗಿಗಳಿಗೆ ವಿಮಾ ಚಾರ್ಜ್ ಪ್ರತಿ ಶತ ಮಾಡುತ್ತಿರುವಲ್ಲಿ ಸಾಮ್ಯವಿದೆಯೇ ?

ಇ) ಬೆಂಗಳೂರು ನಿಯಂತ್ರಣಾಧಿಕಾರಿಯವರು ಮಾಡುತ್ತಿರುವ ವಿಮಾ ಜಾರ್ಜ್‌ಗೂ ಗುಳೇದಗುಡ್ಡದಲ್ಲಿಯ ನಿಯಂತ್ರಣಾಧಿಕಾರಿಯವರು ಮಾಡುತ್ತಿರುವ ವಿಮಾ ಚಾರ್ಜ್‌ಗೂ ಇರುವ ಅಂತರವೆಷ್ಟು ?

ಈ) ಹಾಗಿದ್ದಲ್ಲಿ ಈ ಬಗ್ಗೆ ಸರಕಾರದ ಪರ ಧೋರಣೆ ಏನು ?

ಉ) ರಾಜ್ಯದಲ್ಲಿ ಕೈಮಗ್ಗದ ಉತ್ಪಾದನೆಯು ಭಾಂಗಿಗಳಿಗೆ ಏಕರೂಪದ ವಿಮಾ ಚಾರ್ಜ್ ಮಾಡುವ ವಿಚಾರ ಸರಕಾರದವರಲ್ಲಿದೆಯೇ ?

ಶ್ರೀ ಎಂ.ಪಿ. ಪ್ರಕಾಶ್ (ಸಾರಿಗೆ ರಾಜ್ಯ ಸಚಿವರು). —

ಅ) ಬೆಂಗಳೂರು ವಿಭಾಗದಲ್ಲಿ ಕೈಮಗ್ಗದ ರೇಷ್ಮೆ ಉತ್ಪಾದನೆ ವಸ್ತುಗಳನ್ನು ಪ್ರಯಾಣಿಕರು ಜೊತೆಯಲ್ಲಿ ಕೊಂಡೊಯ್ಯುವ ಪದಾರ್ಥಗಳೆಂದು ಪರಿಗಣಿಸಲಾಗಿರುವುದರಿಂದ ಅವುಗಳ ಮೇಲೆ ಯಾವುದೇ ಅಧಿಶುಲ್ಕವನ್ನು ವಿಧಿಸುವುದಿಲ್ಲ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಮೇಲಿನಂತೆ

ಈ) ಮೇಲಿನಂತೆ

ಉ) ಮೇಲಿನಂತೆ

ಶ್ರೀ ಮಲ್ಲಿಕಾರ್ಜುನ ವಿ.ಬನ್ನಿ.—ಅಧ್ಯಕ್ಷರೇ ಹಾಗಾದರೆ. ಗುಳೇದಗುಡ್ಡದಲ್ಲಿ ರೇಷ್ಮೆ ಉತ್ಪಾದನಾ ವಸ್ತುಗಳನ್ನು ಸಂತೆಯಲ್ಲಿ ಕೊಂಡು ಹೋದರೆ, ಚಾರ್ಜ್ ಮಾಡುವುದಿಲ್ಲ ತಾನೆ ?

ಅಧ್ಯಕ್ಷರು.—ಮಾಡುವುದಿಲ್ಲ ಎಂದು ಹೇಳಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್.—೧-೧೧-೧೯೫೬ರ ಪ್ರಕಾರ, ಮಹಾರಾಷ್ಟ್ರದಲ್ಲಿದ್ದಂತೆ. ೪ ಜಿಲ್ಲೆಗಳಲ್ಲಿ ಪಾರ್ಸಲ್ ವ್ಯವಸ್ಥೆ ಇದೆ. ಉಳಿದ ಭಾಗಗಳಲ್ಲಿ ಪಾರ್ಸಲ್ ವ್ಯವಸ್ಥೆ ಇಲ್ಲದೇ ಇರುವುದರಿಂದ ಪ್ರಯಾಣಿಕರ ಜೊತೆಗೆ ಸಾಮಾನುಗಳನ್ನು ತೆಗೆದುಕೊಂಡು ಹೋಗುವ ಪದಾರ್ಥಗಳೆಂದು ಪರಿಗಣಿಸಲಾಗಿರುವುದರಿಂದ, ಅವುಗಳ ಮೇಲೆ ಯಾವುದೇ ಅಧಿಕ ಶುಲ್ಕವನ್ನು ವಿಧಿಸುವುದಿಲ್ಲ. ಎರಡು ಪರ್ಸೆಂಟ್ ಸರ್‌ಚಾರ್ಜ್ ಮಾತ್ರ ಹಾಕುತ್ತಿದ್ದೇವೆ.

ಶ್ರೀ ಮಲ್ಲಿಕಾರ್ಜುನ ವಿ.ಬನ್ನಿ.—ಗುಳೇದಗುಡ್ಡಕ್ಕೆ ಮಾತ್ರ ಎರಡು ಪರ್ಸೆಂಟ್, ಉಳಿಕೆ ಜಾಗ ಗಳಲ್ಲಿ ಒಂದು ಪರ್ಸೆಂಟ್ ಇದೆ. ಇದನ್ನು ಸರಿಪಡಿಸುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಸದಸ್ಯರು ತಪ್ಪು ಅಭಿಪ್ರಾಯ ಹೊಂದಿದ್ದಾರೆ. ಇಡೀ ನಾಲ್ಕು ಜಿಲ್ಲೆಗಳಲ್ಲಿ ಪಾರ್ಸಲ್ ವ್ಯವಸ್ಥೆ ಇದೆ. ಗುಳೇದಗುಡ್ಡದಲ್ಲಿ ಈ ರೀತಿ ಯಾದ ವಿಶಿಷ್ಟ ವಾದ ಭೇಧ ಭಾವವಾಡಿಲ್ಲ.

ಶ್ರೀ ಮಲ್ಲಿಕಾರ್ಜುನ ವಿ.ಬನ್ನಿ.—ಅಧ್ಯಕ್ಷರೇ, Central excise and sales tax Act 44 entry No. 99ರಲ್ಲಿ ರೇಷ್ಮೆ ಬಟ್ಟೆ ಎನ್ನುವುದಕ್ಕೆ ಅರ್ಥ ವಿವರಣೆ ಕೊಟ್ಟಿದ್ದಾರೆ. ಸೇಲ್ಸ್ ಟ್ಯಾಕ್ಸ್ ಆಕ್ಟ್‌ನಲ್ಲಿ ಕೂಡ ಕೈಮಗ್ಗ ಉತ್ಪಾದನಾ ವಸ್ತುಗಳಿಗೆ ಹೆಚ್ಚಿನ ವಿನಾಯಿತಿ ಕೊಟ್ಟಿದ್ದಾರೆ, ತಾವು ಏಕೆ ಕೊಡಬಾರದು ?

ಶ್ರೀ ಎಂ.ಪಿ. ಪ್ರಕಾಶ್.—ಇದನ್ನು ಏಕಪಕ್ಷೀಯವಾಗಿ ನಿರ್ಧಾರ ಮಾಡುವುದಕ್ಕೆ ಬರುವುದಿಲ್ಲ. ಇಡಕಲ್ಲು, ಬಾದಾಮಿ ಗುಳೇದಗುಡ್ಡ ಮುಂತಾದ ಕಡೆಗಳಲ್ಲಿ ಕೈಗಾರಿಕೆ ಉತ್ಪನ್ನ ಮಾಡತಕ್ಕ ನೇಯ್ಗೆ ಮಾಡತಕ್ಕಂಥ ಪ್ರದೇಶಗಳಲ್ಲಿ ಸರ್‌ಚಾರ್ಜ್ ಹಾಕಬೇಕೆಂದು ಮಹಾರಾಷ್ಟ್ರ ಮತ್ತು ನಮ್ಮ ನಾಡಿಗೆ ಇರತಕ್ಕಂಥ ಒಪ್ಪಂದ. ಈ ಬಗ್ಗೆ ಮಹಾರಾಷ್ಟ್ರ ಸರ್ಕಾರದ ಜೊತೆಯಲ್ಲಿ ಮಾತನಾಡಿ ಅನುಕೂಲ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಪ್ರಶ್ನೆ ೪೪೨ (೯೩೮) (ಮಾನ್ಯ ಸದಸ್ಯರು ಗೈರು ಹಾಜರು)

ಪ್ರಶ್ನೆ ೪೪೩ (೯೪೩) ಮಾನ್ಯ ಸದಸ್ಯರು ಗೈರು ಹಾಜರು

ಪ್ರಶ್ನೆ ೪೪೪ (೯೯೯) Sri S.R. Bommai—This question pertains to the Food Minister.

ಚಾಮರಾಜನಗರ ತಾಲ್ಲೂಕಿನಲ್ಲಿ ವಿಶೇಷ ಯೋಜನೆ ಮೇರೆಗೆ ನಿವೇಶನಗಳ ಹಂಚಿಕೆ

೪೪೫ (೧೦೨೧) ಶ್ರೀ ಎಸ್. ಪುಟ್ಟಸ್ವಾಮಿ (ಚಾಮರಾಜನಗರ).—ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಹಾಗೂ ವಸತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ವಿಶೇಷ ಯೋಜನೆಯನ್ವಯ ಚಾಮರಾಜನಗರ ತಾಲ್ಲೂಕಿನಲ್ಲಿ ಯಾವ ಯಾವ ಹಳ್ಳಿಗಳಲ್ಲಿ ಎಷ್ಟು ಜನ ಬಡ ಹಾಗೂ ವಸತಿ ಹೀನರಿಗೆ ನಿವೇಶನಗಳನ್ನು, ೧೯೮೩ರಲ್ಲಿ ಹಂಚಲಾಗಿದೆ ?

ಆ) ಚಾಮರಾಜನಗರ ತಾಲ್ಲೂಕಿನಲ್ಲಿ ಇನ್ನೂ ಎಷ್ಟು ಜನವಸತಿ ಹೀನರು ಇದ್ದಾರೆ ಹಾಗೂ ಅವರಿಗೆ ಯಾವಾಗ ನಿವೇಶಗಳನ್ನು ಹಂಚಲಾಗುವುದು ?

ಶ್ರೀ ಎ. ಲಕ್ಷ್ಮಿಸಾಗರ್ (ಕಾನೂನು, ಸಂಸದೀಯ ಹಾಗೂ ವಸತಿ ಮಂತ್ರಿಗಳು).—

ಅ) ಚಾಮರಾಜನಗರ ತಾಲ್ಲೂಕಿಗೆ ಸೇರಿದ ಈ ಕೆಳಕಂಡ ಗ್ರಾಮಗಳಲ್ಲಿ ನಿವೇಶನಗಳನ್ನು ೧-೪-೮೩ರಿಂದ ಇದುವರೆವಿಗೂ ಹಂಚಿರುತ್ತೆ.

೧) ಬೇಡರಪುರ	೧೧೨
೨) ಮಂಗಲ	೧೩೪
೩) ಶಿವಪುರ	೫೪
೪) ಕಿರಗಸೂರು	೧೨
೫) ಬದನಗುಪ್ಪೆ	೨೪
೬) ಮಲ್ಲಯ್ಯನಪುರ	೫೬
೭) ಬೇಡಮೂಡ್ಲು (ಶಿರಮಳ್ಳಿ)	೪೨
೮) ಬಂಡಿಗೆರೆ	೭೬
೯) ನವೀಲೂರು	೨೧೪
೧೦) ಗಾಳಿಪುರ	೨೮೨
೧೧) ನಂಜೇದೇವನಪುರ	೪೦
ಒಟ್ಟು	೧೦೪೬

ಆ) ಈ ತಾಲ್ಲೂಕಿನಲ್ಲಿ ಇನ್ನೂ ೨೯೩೩ ಜನವಸತಿ ಹೀನರಿದ್ದಾರೆ. ಅವರಿಗೂ ನಿವೇಶನಗಳನ್ನು ಆದಷ್ಟು ಶೀಘ್ರದಲ್ಲಿ ವಿತರಿಸಲಾಗುವುದು.

ಶ್ರೀ ಎಸ್. ಪುಟ್ಟಸ್ವಾಮಿ.—ಸ್ವಾಮಿ ಅಧ್ಯಕ್ಷರೇ, ಮಂತ್ರಿಗಳು ೧-೪-೮೩ರಿಂದ ಇದುವರೆಗೆ ಕೆಳಕಂಡ ೧೧ ಹಳ್ಳಿಗಳಲ್ಲಿ ಸುಮಾರು ೧೦೪೬ ಸೈಟುಗಳನ್ನು ವಿಲೇವಾರಿ ಮಾಡಿದ್ದೇವೆಂದು ಹೇಳಿದ್ದಾರೆ. ಇದರಲ್ಲಿ ಕಿರಗಸೂರು ಗ್ರಾಮದಲ್ಲಿ ೧೨ ಮಾತ್ರ ಹಂಚಿದ್ದಾರೆ. ಬದನಗುಪ್ಪೆಯಲ್ಲಿ ೨೪ ಸೈಟುಗಳನ್ನು ಹಂಚಿದ್ದಾರೆ. ಬಂಡಿಗೆರೆ ಗ್ರಾಮದಲ್ಲಿ ೭೬ ಸೈಟುಗಳನ್ನು ಹಂಚಿದ್ದಾರೆ, ಬೇಡಮಾಮ್ಲು ಗ್ರಾಮದಲ್ಲಿ ೪೨ ಹಂಚಿದ್ದಾರೆ. ದುರ್ಬಲವರ್ಗದವರು, ಹಿಂದುಳಿದವರು ಹೆಚ್ಚಾಗಿರತಕ್ಕ ಈ ಹಳ್ಳಿಗಳಲ್ಲಿ ಎಷ್ಟು ಮಂದಿ ಬೆನಿಫಿಸಿಯರೀಸ್ ಇದ್ದಾರೆಂದು ಲಿಸ್ಟ್ ಮಾಡಿ ಅಕ್ವಿಸಿಷನ್ ಇನ್ಸ್‌ಯೀಟ್ ಮಾಡಿದ್ದೀರಾ ? ಸ್ವಾಧೀನ ಮಾಡಿರತಕ್ಕ ಜಮೀನುಗಳ ಬಗ್ಗೆ ತಕರಾರು ಇದೆ. ತಕರಾರನ್ನು ಬೇಗ ಪರಿಹಾರ ಮಾಡಿ ಉಳಿದವರಿಗೆ ನಿವೇಶನ ಹಂಚುವುದಕ್ಕೆ ಪ್ರಯತ್ನ ಮಾಡುತ್ತೀರಾ ?